ನಟ ಉಮೇಶನಂತೆಯೇ ರಾಗವಾಗಿ ಕೇಳುತ್ತಾನೆ. ಜಬ್ಬರನಿಗೆ ಬಹಳ ಹಳೆಯ ದೋಸ್ತ ಅವನು. ಈ ಹಿಂದೆ ಬೆಂಗಳೂರಿನ 'ತೆಕ್ಕೋಜಿ ಪ್ಯಾರಡೈಸ್' ಎಂಬ ಪುಟ್ಟ ಹೋಟೆಲಿನಲ್ಲಿ ಒಟ್ಟಾಗಿ ಮಸಾಲೆ ಅರೆದವರೇ ಅವರಿಬ್ಬರೂ. ಅಲ್ಲಿನ ಇಡ್ಲೀ, ವಡಾ, ಪಲಾವ್, ಪೂರಿ, ದೋಸೆ, ಕಾಫಿ, ಟೀ, ಮಾಲ್ಟ್‌ಗಳ ಜೊತೆ ತಾವೂ ಕುದಿಯುತ್ತಾ, ಬೇಯುತ್ತಾ, ಉಬ್ಬುತ್ತಾ, ಹುಳಿ ಬರುತ್ತಾ, ಹಬೆಯಾಡುತ್ತಾ ಅವರಿಬ್ಬರೂ ಆರು ವರ್ಷಗಳನ್ನು ಜೊತೆಯಾಗಿ ಕಳೆದಿದ್ದರು. ಬಳಿಕ ಅದ್ಯಾರಿಂದಲೋ ಇಸಕೊಂಡ ಮೀಟರು ಬಡ್ಡಿಗೆ ಅದರ ಮಾಲಿಕ ಇಡೀ ತೆಕ್ಕೋಜಿ ಪ್ಯಾರಡೈಸನ್ನೇ ಬಿಟ್ಟುಕೊಟ್ಟಾಗ ಅನಿವಾರ್ಯವಾಗಿ ಜಬ್ಬರ್, ಉಮೇಶಿ ಇಬ್ಬರೂ ಒಬ್ಬರನ್ನೊಬ್ಬರು ಅಗಲಿದ್ದರು. ಜಂಗ್ ಸೋತು ಮರಳಿದ ನಿರುಪಾಯ ಸಿಪಾಯಿಯಂತೆ ಹುಟ್ಟೂರು ಕೋಳೀಮಕ್ಕಿಗೆ ಮರಳಿದ ಜಬ್ಬರನನ್ನು ಅವನ ಅಬ್ಬೂ ಪಕ್ಕದ ಮನೆಯ ಖತೀಜಾಳ ಜೊತೆ ನಿಕಾಹ್ ಮಾಡಿದ್ದರು. ಬುರ್ಖಾದ ಮರೆಯೊಳಗಿನಿಂದ ಬಿದಿಗೆ ಚಂದ್ರನಂತೆ ತನಗಷ್ಟೇ ತೆರೆದು ಬರುತ್ತಿದ್ದ ಅವಳ ಸುಕೋಮಲ ಮುಖವನ್ನು ಇನ್ನಿಲ್ಲದಂತೆ ಮುದ್ದಿಸಿದ್ದರ ಪರಿಣಾಮವಾಗಿ ಒಂದೇ ವರುಷಕ್ಕೆ ಆಸಿಫ್ ಹುಟ್ಟಿದ್ದ.

ಮನೆಯೊಳಗೆ ದುಡಿಯುವ ಅಮ್ಮಿ-ಖತೀಜಾರನ್ನೂ, ಇಡೀ ವಿಶ್ವವನ್ನೇ ಇಂಚು ಇಂಚಾಗಿ ದಾಟುವಂತೆ ಮನೆಯುದ್ದಕ್ಕೂ ಅಂಬೆಗಾಲಿಡುತ್ತಿರುವ ಆಸಿಫನನ್ನೂ ಸಾಕುವ ಗುರುತರ ಜವಾಬ್ದಾರಿ ಹಠಾತ್ತನೆ ಜಬ್ಬರನ ತಲೆ ಮೇಲೆ ಬಿದ್ದದ್ದು ಅಬ್ಬು ಇದ್ದಕ್ಕಿದ್ದಂತೆ ಹೋಗಿಬಿಟ್ಟಾಗ. ನೊಣಬೂರಿನ ಬಸ್ ಸ್ಟಾಪಿನ ಪಕ್ಕ ಅವರು ಇಟ್ಟಿದ್ದ ಪ್ಲಾಸ್ಟಿಕ್ ವಸ್ತುಗಳ ಅಂಗಡಿ ಕೊಡುತ್ತಿದ್ದ ದುಡಿಮೆ ದಿನಚರಿ ಭಾನುವಾರದಿಂದ ಶುಕ್ರವಾರಕ್ಕೆ ಬರುವಷ್ಟರಲ್ಲೇ ಖರ್ಚಾಗಿಹೋಗುತ್ತಿತ್ತು. ಮಾವ ಇಸ್ಮಾಯಿಲ್ ಹೇಳಿದಂತೆ ಅಡಕೆ ವ್ಯಾಪಾರ ಮಾಡೋಣವೆಂದರೆ ಅದಕ್ಕೆ ಬೇಕಾದ ವಾಕ್ ಚಾತುರ್ಯ ಅವನಿಗಿರಲಿಲ್ಲ. 'ಏನ್ ಸಾಬ್ರೇ, ಮಾರ್ಕೇಟಲ್ಲಿ ರೇಟು ನಲವತ್ತೆಂಟಿದ್ಯಂತೆ. ನೀವೇನು ಬರೀ ನಲವತ್ತೇಳೇ ಕೊಡ್ತೀರಿ?' ಎಂದು ರೈತರು ಲಾ ಪಾಯಿಂಟ್ ಹಾಕಿದೊಡನೆ 'ಯಾರ್‍ರೀ ಹೇಳಿದ್ದು? ಇವತ್ತಿನ ಮಾರ್ಕೇಟಿಗೆ ಇದೇ ಹೈಯಸ್ಟ್ ರೇಟು. ಬೇಕಾದ್ರೆ ಸದೇನ್ ಶೆಟ್ರನ್ನ ಕೇಳಿ ನೋಡಿ? ನಿಮ್ ಅಡ್ಕೆಗೆ ಹೈಯಸ್ಟ್ ರೇಟು ಕೊಡ್ತಿದೀನಿ. ಅದೂ ಅಲ್ದೇ ನಿಮ್ದೂ ಅಡ್ಕೆ ಅಷ್ಟೊಂದು ಪಸಂದಾಗಿಲ್ಲ' ಎಂದು ಅವನಂತೆ ಮರುವಾದ ಹೂಡುವುದು ಅವನಿಂದ ಆಗುತ್ತಲೇ ಇರಲಿಲ್ಲ. ಈ ರಗಳೆಯೇ ಬೇಡ ಎಂದು ಹೈಸ್ಕೂಲು ಗೆಳೆಯ ನಾಸಿರ್‌ನ ಜೊತೆ ದುಬೈಗೆ ಹೋಗೋಲಿಕ್ಕೆ ಸಿದ್ಧನಾಗಿ ಪಾಸ್ಪೋರ್ಟು ಮಾಡಿಸಲು ಬೆಂಗಳೂರಿಗೆ ಹೋಗಿದ್ದಾಗಲೇ ಆಸಿಫನಿಗೆ ಹುಷಾರು ತಪ್ಪಿತ್ತು. ಮಗು ಮೂರು ಹಗಲು, ಮೂರು ರಾತ್ರಿಗಳಿಂದ ಒಂದೇ ಸಮನೆ ಅಳುತ್ತಿತ್ತು. ಹಣೆ ಮುಟ್ಟಿ ನೋಡಿದರೆ ಒಳಗೆ ಅಡುಗೆ ಒಲೆಯೊಂದು ಉರಿಯುತ್ತಿದೆಯೇನೋ ಎಂಬಷ್ಟು ಶಾಖ. ಗೊತ್ತಿರುವ ಡಾಕ್ಟರುಗಳೆಲ್ಲ ಮುಗಿದು ಕೊನೆಗೆ ಪ್ಲಸ್ ಚಿಹ್ನೆಯಿರುವ ಕಡೆಗೆಲ್ಲ ದಿಕ್ಕೆಟ್ಟವರಂತೆ ನುಗ್ಗಿದ್ದರು ಅಮ್ಮಿ ಹಾಗೂ ಖತೀಜಾ. ತಾನು ಮೂರು ದಿನ ಮನೆಯಲ್ಲಿಲ್ಲದ್ದಕ್ಕೇ ತನ್ನ ಮನೆ ಈ ಮಟ್ಟಿಗೆ ಬೀದಿಪಾಲಾಗಿರುವಾಗ, ಇನ್ನು ತಾನೇನಾದರೂ ವರ್ಷದ ಮುನ್ನೂರರವತ್ತೈದು ದಿನವೂ ಇಲ್ಲದೇ ಹೋದರೆ ಏನಾಗಬಹುದು ಎಂಬ ಕಲ್ಪನೆಗೇ ನಡುಗಿಹೋದ ಜಬ್ಬರ್ ತನ್ನ ಮರಳುನಾಡಿನೆಡೆಗಿನ ವಲಸೆಯನ್ನು ಆ ಕ್ಷಣವೇ ರದ್ದು ಮಾಡಿದ. ಹೀಗೆ ಹೊರಗೂ ಹೋಗದೇ, ಒಳಗೂ ನಿಲ್ಲದೇ ಹೊಸ್ತಿಲ ಮೇಲೇ ಉಳಿದುಹೋದ ಅತಂತ್ರ ಬದುಕಿನೊಳಕ್ಕೆ ಪ್ರೇಂ ಪ್ರೇಂ ಎಂದು ಹಾರನ್ ಹಾಕುತ್ತಾ ಬಲಗಾಲಿಟ್ಟುಕೊಂಡು ಒಳಬಂದಿದ್ದೇ ಶಿವಶಕ್ತಿ ಸ್ಲೀಪರ್.

ಕಂಡಕ್ಟರ್ ಮುಸ್ತುವಿನ ಶಿಫಾರಸಿನ ಮೇಲೆ ತಮ್ಮ ಹೊಸನಗರ-ಬೆಂಗಳೂರಿನ ಹೊಸ ಬಸ್ಸಿನ ಕೀಯನ್ನು ಜಬ್ಬರನಿಗೆ ಕೊಟ್ಟಿದ್ದರು ಕಾರಣಗಿರಿ ಸೌಕಾರರು. ಊರು ಹಾಗೂ ಬೆಂಗಳೂರುಗಳ ನಡುವೆ ಅತೃಪ್ತ ಆತ್ಮಗಳಂತೆ ಅಲೆದಾಡಿಕೊಂಡಿರುವ ವಲಸಿಗರನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ತಲುಪಿಸುತ್ತಿರುವ ಬಸ್ಸು ತನ್ನ ಅತಂತ್ರ ಬದುಕನ್ನೂ ಕೂರಿಸಿಕೊಂಡು ದಡದತ್ತ ಸಾಗುತ್ತಿದೆ ಎಂಬ ನಂಬಿಕೆ ಬಂದಿದ್ದು ಮೊದಲ ತಿಂಗಳ ಸಂಬಳ ಸಿಕ್ಕಾಗಲೇ. ಅಲ್ಲಿಂದ ಮುಂದೆ ಶಿವಶಕ್ತಿ ಜಬ್ಬಾರನ ಉಸಿರಾಯಿತು. ಡ್ರೈವರಿನ ಸೀಟಿನ ಮೇಲೆ ಹೀಗೆ ಕ್ಲಚ್ಚು, ಬ್ರೇಕುಗಳ ಮೇಲೆ ಕಾಲಿಟ್ಟುಕೊಂಡೇ ಹುಟ್ಟಿದವನೇನೋ ಎಂಬಂತೆ ಆ ಜಾಗಕ್ಕೆ, ಆ ಉದ್ಯೋಗಕ್ಕೆ ಒಗ್ಗಿಹೋದ ಜಬ್ಬರ್. ಅಲ್ಲಿಂದ ಮುಂದೆ ಕತ್ತಲ ತಿರುವುಗಳಲ್ಲಿ ಹೊಮ್ಮುತ್ತಿದ್ದ ಶಿವಶಕ್ತಿಯ ಪ್ರೇಂ ಪ್ರೇಂ ಎಂಬ ಕೇಕೆ ಅವನ ಬದುಕಿನದ್ದೂ ಆಗಿಹೋಯಿತು.